ಅಧ್ಯಕ್ಷರು: ಅವರು ಹೇಳುವುದು ಕೌನ್ಸಿಲ್‌ನಲ್ಲಿ ಪಾಸ್ ಆಗಬೇಕೆಂದು.

ಶ್ರೀ ಎಸ್. ಸುರೇಶ್‌ಕುಮಾರ್: ಸರ್ಕಾರ ಇನ್ನು ಅಲರ್ಟ್ ಆಗಿರಬೇಕಾಗಿತ್ತು. ಇವತ್ತು ಮೂರನೇ ದಿವಸ.

ಶ್ರೀ ಡಿ.ಬಿ. ಇನಾಂದಾರ್: ಮಾನ್ಯ ಅಧ್ಯಕ್ಷರೆ, ಐಟಿ ಸೆಕ್ಟಾರ್ This is the sector that is growing.

ಅಧ್ಯಕ್ಷರು: ಇನಾಂದಾರ್‌ರವರೇ, ನೀವು ಬಿಲ್ ಮಂಡಿಸಿ, ನೋಡೋಣ ಅಷ್ಟರಲ್ಲಿ ಅವರೇನಾದರೂ ಮನಸ್ಸು ಬದಲಾವಣೆ ಮಾಡುವುದ್ದಾದರೆ ಮಾಡಲಿ.

8. ಶಾಸನ ರಚನೆ

ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ, 2004 ಮಂಡನೆಗೆ ಅನುಮತಿ ಕೋರಿಕೆ

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, "2004ರ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸಲು ಅನುಮತಿ ಕೋರುತ್ತೇನೆ.

ಅಧ್ಯಕ್ಷರು: ಪ್ರಸ್ತಾವ ಏನೆಂದರೆ

"2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಮಂಡಿಸಲು ಅನುಮತಿ ನೀಡುವುದು"

ಪ್ರಸ್ತಾವ ಅಂಗೀಕರಿಸಲ್ಪಟ್ಟಿತು ಮತ್ತು ಅನುಮತಿ ನೀಡಲಾಯಿತು

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಸಭೆಯ ಮುಂದೆ ಮಂಡಿಸುತ್ತೇನೆ."

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ.

2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ

ಪರ್ಯಾಲೋಚನಾ ಪ್ರಸ್ತಾವ

ಶ್ರೀ ಡಿ.ಬಿ. ಇನಾಂದಾರ್ (ಮಾಹಿತಿ, ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಸಚಿವರು): ಮಾನ್ಯ ಅಧ್ಯಕ್ಷರೆ, "2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕವನ್ನು ಪರ್ಯಾಲೋಚಿಸಬೇಕೆಂದು ಕೋರುತ್ತೇನೆ."

ಪ್ರಸ್ತಾವವನ್ನು ಮಂಡಿಸಲಾಯಿತು

ಅಧ್ಯಕ್ಷರು: ವಿಧೇಯಕವನ್ನು ಮಂಡಿಸಲಾಗಿದೆ. 2004ನೇ ಸಾಲಿನ ಬೆಂಗಳೂರು ಮಾಹಿತಿ ತಂತ್ರಜ್ಞಾನ ವಿಕಾಸ ವಲಯ ಪ್ರಾಧಿಕಾರ ವಿಧೇಯಕ

ಶ್ರೀ ಎಸ್. ಸುರೇಶ್ ಕುಮಾರ್: ಸನ್ಮಾನ್ಯ ಅಧ್ಯಕ್ಷರೇ, I am a point of order. ನಡವಳಿಕೆ ನಿಯಮಗಳ ಪ್ರಕಾರ, ನಿಯಮ 84ರ ಪ್ರಕಾರ ಸದಸ್ಯನ ಉಪಯೋಗಕ್ಕಾಗಿ ವಿಧೇಯಕ ಪ್ರತಿಗಳನ್ನು ಒದಗಿಸದೆ ಹೊರತು ಅಂತಹ ಯಾವುದೇ ಪ್ರಸ್ತಾವನೆ ಮಾಡತಕ್ಕದ್ದಲ್ಲ, ಮತ್ತು ಪ್ರಸ್ತಾವವನ್ನು ಮಂಡಿಸುವ ಎರಡು ದಿನಗಳ ಮುಂಚೆ ವಿಧೇಯಕದ ಪ್ರತಿಗಳನ್ನು ಒದಗಿಸಬೇಕೆಂದು ಇದೆ.

ಅಧ್ಯಕ್ಷರು: ತಾವೇ ಹೇಳಿದಿರಿ ಇವತ್ತು ಮಂಡಿಸಿ ಎಂದು.

ಶ್ರೀ ಎಸ್. ಸುರೇಶ್ ಕುಮಾರ್: ಮಂಡಿಸುವುದು ಮಾತ್ರವಷ್ಟೆ. ನಾಳೆ ತೆಗೆದುಕೊಳ್ಳಿ. ಅವರು ಈಗಲೇ ಹೊರಟುಬಿಟ್ಟರೆ? ಅದರ ಬಗ್ಗೆ ನಾವು ಓದಬೇಕಾಗಿದೆ. We are answerable.

ಅಧ್ಯಕ್ಷರು: ಇನಾಂದಾರ್‌ರವರೇ, ನಾಳೆ ಪಾಸ್ ಮಾಡಿಕೊಳ್ಳೋಣ.